ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಖರೀದಿ

861 (1302) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ, ಅಸಹಾಯಕ ಪರಿಸ್ಥಿತಿಯಲ್ಲಿ ಇರುವ ರೈತರ ಕೃಷಿ ಉತ್ಪನ್ನಗಳನ್ನುಕೊಳ್ಳುವ ಯೋಜನೆಯನ್ನು ಸರ್ಕಾರವು ಜಾರಿಗೊಳಿಸಿದೆಯೇ?

ಆ) ಹಾಗಿದ್ದಲ್ಲಿ ಯಾವ ಬಗೆಯ ಕೃಷಿ ಉತ್ಪನ್ನಗಳನ್ನು ಕೊಳ್ಳಲಾಗಿದೆ;

ಇ) ಈವರೆವಿಗೆ ಕೃಷಿ ಉತ್ಪನ್ನಗಳನ್ನು ಕೊಳ್ಳಲು ವಿಚ್ರ್ಯಮಾಡಿರುವ ಹಣವೆಷ್ಟು (ಎ.ಪಿ.ಎಂ.ಸಿ.ಗಳ ಅನ್ವಯ ವಿವರ ನೀಡುವುದು)

ಈ) ಕೃಷಿ ಉತ್ಪನ್ನಗಳಿಗೆ ಕೃಷಿಯ ಖಚುರ ವೆಚ್ಚದ ಆಧಾರದ ಮೇಲೆ, ಕನಿಷ್ಠ ಬೆಲೆಯನ್ನು ದೊರಕಿಸಿಕೊಡಲು ಸರ್ಕಾರ ಈವರೆವಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು

ಆ) ಈರುಳ್ಳಿ, ಆಲೂಗೆಡ್ಡೆ, ತೊಗರಿ, ಕೃಷಿ ಉತ್ಪನ್ನಗಳನ್ನು ಕೊಳ್ಳಲಾಗಿದೆ.

ಇ) ವಿವರವನ್ನು ಪ್ರತ್ಯೇಕ ತಃಖೆಯಲ್ಲಿ ಲಗತ್ತಿಸಲಾಗಿದೆ.

ಈ) ಆವರ್ತ ನಿಧಿಯನ್ನು ಸ್ಥಾಪಿಸಿರುತ್ತದೆ.

ಅನುಬಂಧ

ಆವರ್ತನಿಧಿಯಿಂದ ಬಿಡುಗಡೆಯಾದ ಹಣದ ವಿವರ ಮತ್ತು ಖರೀದಿಸಲಾದ ಹುಟ್ಟುವಳಿಗಳ ವಿವರ:

1) 1999-2000ನೇ ಸಾಲಿನಲ್ಲಿ ಈರುಳ್ಳಿ ಖರೀದಿಗಾಗಿ ಜಿಲ್ಲಾಧಿಕಾರಿಗಳು, ಧಾರವಾಡ, ಬೆಳಗಾಂ, ಗದಗ್, ಹಾವೇರಿ, ಬಿಜಾಪುರ, ಬಾಗಲಕೋಟೆ ಇವರಿಗೆ ರೂ. 133.32ಲಕ್ಷ ಬಿಡುಗಡೆ ಮಾಡಿದೆ. ಹು 103.345 ಕ್ವಿಂಟಾಲ್ ಹಾಗೂ ಬೆಳಗಾವಿ ಖರೀದಿ ಕೇಂದ್ರದಲ್ಲ2,037.80 ಕ್ವಂಟಾಲ್ ಈರುಳ್ಳಿಯನ್ನು ರೂ. 105.71 ಲಕ್ಷಗಳ ವೆಚ್ಚದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾ ಮಂಡಳಿ ಮುಖಾಂತರ ಖರೀದಿಸಲಾಗಿದೆ.

2) ಪ್ರಸ್ತುತ ಸಾಲಿನಲ್ಲಿ ಆಲೂಗಡ್ಡೆ ಖರೀದಿಸಲು ಜಿಲ್ಲಾಧಿಕಾರಿಗಳು, ಧಾರವಾಡ ಮತ್ತು ಬೆಳಗಾವಿ ಇವರಿಗೆ ಕ್ರಮವಾಗಿ ರೂ. 4.25 ಕೋಟಿ ಮತ್ತು 90.00 ಲಕ್ಷ ಬಿಡುಗಡೆ ಮಾಡಿದೆ. ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಅನುಕ್ರಮವಾಗಿ 3190 ಹಾಗೂ 688 ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಒಟ್ಟು 1, 12, 370-70 ಕ್ವಿಂಟಾಲ್ ಆಲೂಗಡ್ಡೆಯನ್ನು ರೂ. 500-00 ಲಕ್ಷಗಳ ವೆಚ್ಚದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಮುಖಾಂತರ ಖರೀದಿಸಲಾಗಿದೆ.

3) ಕೋಲಾರ ಜಿಲ್ಲೆಯಲ್ಲಿ ಆಲೂಗಡ್ಡೆ ಖರೀದಿಸಲು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಇವರಿಗೆ ರೂ. 50.00 ಲಕ್ಷ ಮತ್ತು ಹಾಪ್‌ಕಾಮ್ಸ್ ಬೆಂಗಳೂರು ಇವರಿಗೆ ರೂ. 25.00 ಲಕ್ಷ ಬಿಡುಗಡೆ ಮಾಡಿದೆ.

4) ತೊಗರಿ ಖರೀದಿಗಾಗಿ ರೂ. 3.00ಕೋಟಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಇವರಿಗೆ ಬಿಡುಗಡೆ ಮಾಡಿದೆ. ಗುಲ್ಬರ್ಗಾ ಜಿಲ್ಲೆಯಿಂದ 14243 ಕ್ವಿಂಟಾಲ್‌ಗಳನ್ನು ಒಟ್ಟು 1117 ರೈತರಿಂದ ಖರೀದಿಸಲಾಗಿದೆ.

5) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಇವರಿಗೆ ಮೆಕ್ಕೆಜೋಳ ಖರೀದಿಗಾಗಿ ಭರಿಸಿದ ಪ್ರಾಸಂಗಿಕ ವೆಚ್ಚಗಳ ಸಂಬಂಧ ರೂ. 50.00 ಲಕ್ಷಗಳ ತಾತ್ಕಾಲಿಕ ಮುಂಗಡ(ಬ್ರಡ್ಜ್‌ಲೋನ್) ಬಿಡುಗಡೆ ಮಾಡಿದೆ.

ರಾಜ್ಯದಲ್ಲಿ ಆಶ್ರಯ ಮನೆಗಳ ನಿರ್ಮಾಣ

862 (1304) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-2001 ನೇ ಸಾಲಿಗೆ ರಾಜ್ಯದಲ್ಲಿ ಆಶ್ರಯ ಮನೆಗಳ ನಿರ್ಮಾಣ ನಿಗಧಿಪಡಿಸಲಾಗಿರುವ ಗುರಿಯೆಷ್ಟು;

ಆ) ನಿಗಧಿಪಡಿಸಲಾಗಿರುವ ಗುರಿಯ ಆನ್ವಯ ಮನೆಗಳು ನಿರ್ಮಾಣವಾಗಿದೆಯೇ; (ಜಿಲ್ಲಾವಾರು ವಿವರಗಳನ್ನು ನೀಡುವುದು);

ಇ) 2001-2002 ನೇ ಸಾಲಿಗೆ ಆಶ್ರಯ ಯೋಜನೆ ಅನ್ವಯ ಗೃಹ ನಿರ್ಮಾಣದ ಗುರಿಯೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ನಗರ - 25000

ಗ್ರಾಮೀಣ - 130000

ಆ) ಅನುಬಂಧದಲ್ಲಿ ವಿವರಗಳನ್ನು ಒದಗಿಸಲಾಗಿರುತ್ತದೆ.

ಇ) ಗುರಿಯನ್ನು ಇನ್ನು ನಿಗಧಿಗೊಳಿಸಿರುವುದಿಲ್ಲ.